# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-319/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 28/09/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಮರಿಯನ್ ಪ್ರಾನ್ಸಿಸ್ ಡಿ'ಸೋಜ ಬಿನ್ ದಿ.ಮೆಗ್ದಲಿನ್ ಡಿ'ಸೋಜ, ಪದವು ಮನೆ, ಇನ್ನಾ ಗ್ರಾಮ, ಸಾಂತೂರು ಪೋಸ್ಟ್ ವಯಾ ಪಡುಬಿದ್ರೆ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಮರಿಯನ್ ಪ್ರಾನ್ಸಿಸ್ ಡಿ'ಸೋಜ ಇವರು ಈ ಸಂಸ್ಥೆಗೆ ದೂರು ನೀಡಿ ಶ್ರೀ ರಾಮಚಂದ್ರ ಬಿ. ಚವ್ಹಾಣ್, ಭೂಮಾಪಕರು, ತಾಲ್ಲೂಕು ಕಛೇರಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧ ಈ ಕೆಳಕಂಡಂತೆ ದೂರು ಸಲ್ಲಿಸಿರುತ್ತಾರೆ.

ದೂರಿನಂಶಗಳೇನೆಂದರೆ ಕಾರ್ಕಳ ತಾಲ್ಲೂಕು, ಇನ್ನಾ ಗ್ರಾಮದ ದೂರುದಾರರ ಸ್ವಂತ ಹಕ್ಕಿನ ಮತ್ತು ಸ್ವಾಧೀನ ಹೊಂದಿರುವ ಸರ್ವೆ ನಂಬರ್ 93/2ರಲ್ಲಿನ 1 ಎಕರೆ 24 ಸೆಂಟ್ಸ್ ಜಮೀನಿನ ಗಡಿ ಗುರುತನ್ನು ಗುರುತಿಸಿ ಕೊಡಲು ಅರ್ಜಿಯನ್ನು ತಾಲ್ಲೂಕು ಕಛೇರಿಗೆ ದಿ:17/06/2016 ರಂದು ಸಕಾಲದಲ್ಲಿ ಅರ್ಜಿ ನೀಡಿದ್ದು, ಈ ಬಗ್ಗೆ ಜಮೀನನ್ನು ಅಳತೆ ಮಾಡಲು ಶ್ರೀ ರಾಮಚಂದ್ರ ಬಿ. ಚವ್ಹಾಣ್, (ಎದುರುದಾರರು) ಎಂಬ ಮೋಜಣಿದಾರರಿಗೆ ತಾಲ್ಲೂಕು ಕಛೇರಿಯಿಂದ ಕೆಲಸವನ್ನು ವಹಿಸಿಕೊಡಲಾಗಿತ್ತು. ಸದರಿ ಶ್ರೀ ರಾಮಚಂದ್ರ ಚವ್ಹಾಣ್‌ರವರು ದೂರುದಾರರಿಗೆ ಹಾಗೂ ಜಮೀನಿನ ಬಾಜುದಾರರಾದ ಶ್ರೀ ಹೆನ್ರಿ ಡಿಸಿಲ್ವಾ, ಶ್ರೀ ರೋಕಿ ಡಿಸಿಲ್ವ, ಶ್ರೀ ವಿಜಿತ್ ಡಿಸಿಲ್ವ ಹಾಗೂ ವಿಲ್ಲಿ ಡಿಸಿಲ್ವ ಇವರಿಗೆ ನೋಟೀಸ್ ನೀಡಿ ದಿ:15/07/2016 ರಂದು ಇನ್ನಾ ಗ್ರಾಮದ ಸರ್ವೆ ನಂಬರ್ 93/2 ರ ಮೋಜಣಿ ಕೆಲಸ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಅದರಂತೆ, ಶ್ರೀ ರಾಮಚಂದ್ರ ಬಿ. ಚವ್ಹಾಣ್‌ರವರು ದಿ:15/07/2016ರಂದು ಮೋಜಣಿಯ ಸ್ಥಳಕ್ಕೆ ಬಂದಿದ್ದು, ಬರುವಾಗ ಅಳತೆಗೆ ಸಂಬಂಧಿಸಿದ ಗ್ರಾಮ ನಕ್ಷೆಯನ್ನಾಗಲೀ ಅಥವಾ ತಮ್ಮ ಜಮೀನಿನ ನಕ್ಷೆಯಾಗಲೀ ತರದೇ ದೂರುದಾರರನ್ನು ವಿಚಾರಿಸದೇ ಜಮೀನಿನ ಗಡಿ ಗುರುತು ಸಹ ಮಾಡದೇ ಹಿಂತಿರುಗಿರುತ್ತಾರೆ. ಆ

ಸಮಯದಲ್ಲಿ ಸದರಿ ಜಮೀನಿನ ಬಾಜುದಾರರು ತೊಂದರೆ ಮಾಡಬಹುದೆಂಬ ಉದ್ದೇಶದಿಂದ ಶ್ರೀ ಅರಣ್ ಕುಮಾರ್ ಮತ್ತು ಶ್ರೀಮತಿ ವಿಶಾಲಾಕ್ಷಿ ಎಂಬ ಪೊಲೀಸರುಗಳನ್ನು ಪಡುಬಿದ್ರೆ ಪೊಲೀಸ್ ಠಾಣೆಯಿಂದ ಕಳುಹಿಸಿಕೊಡಲಾಗಿತ್ತು. ಅದೇ ಸಮಯದಲ್ಲಿ ದೂರುದಾರರ ಮೇಲೆ ಒತ್ತಡ ಹೇರುವ ದೃಷ್ಟಿಯಿಂದ ಶ್ರೀ ಜಗದೀಶ್ ಶೆಟ್ಟಿ, ಎ.ಎಸ್.ಐ ಮತ್ತು ಇತರೆ 4 ಜನ ಪೊಲೀಸರನ್ನು ಶ್ರೀ ರಾಮಚಂದ್ರ ಚವ್ಹಾಣ್‌ರವರು ಕರೆದುಕೊಂಡು ಬಂದಿದ್ದು, ಈ ಜನರ ಗುಂಪು ಕೂಡಿಕೊಂಡು ಸರ್ವೇಯರ್ ಶ್ರೀ ರಾಮಚಂದ್ರ ಚವ್ಹಾಣ್‌ರವರೊಡನೆ ಮಾತನಾಡುತ್ತಿದ್ದರೆ ಹೊರತು ದೂರುದಾರರ ಜಮೀನಿನ ಸರ್ವೇ ಕೆಲಸವನ್ನು ಮಾಡಿರುವುದಿಲ್ಲ. ಇದರಿಂದ ಶ್ರೀ ರಾಮಚಂದ್ರ ಚವ್ಹಾಣ್ ಇವರ ಬಗ್ಗೆ ತನಗೆ ವಿಶ್ವಾಸ ಇಲ್ಲವೆಂದು ಹಾಗೂ ಬೇರೆ ಸರ್ವೇಯರ್ ಅನ್ನು ಸರ್ವೇ ಕಾರ್ಯಕ್ಕೆ ಒದಗಿಸಬೇಕೆಂದು ದಿನಾಂಕ 04/08/2016 ರಂದು ದೂರುದಾರರು ಕಾರ್ಕಳ ತಹಶೀಲ್ದಾರ್‌ರವರಿಗೆ ಮನವಿಯನ್ನು ಸಲ್ಲಿಸಿದ್ದರೂ ಸಹ ಕಾರ್ಕಳ ತಹಶೀಲ್ದಾರ್‌ರವರು ಶ್ರೀ ರಾಮಚಂದ್ರ ಚವ್ಹಾಣ್‌ರವರನ್ನೇ ದಿ:24/08/2016 ರಂದು ಅಳತೆ ಕಾರ್ಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಆ ದಿನವು ಸಹ ಸದರಿ ಶ್ರೀ ರಾಮಚಂದ್ರ ಚವ್ಹಾಣ್ ರವರು ಅಳತೆ ಮಾಡದೇ ಹಾಗೂ ದೂರುದಾರರೊಡನೆ ಮಾತನಾಡದೇ ಹಿಂದಿರುಗಿರುತ್ತಾರೆ. ದೂರುದಾರರು ತಮ್ಮ ಜಮೀನಿನ ಅಳತೆಗಾಗಿ ಅರ್ಜಿ ನೀಡಿ ನಿಗಧಿತ ಫೀಸ್ ಅನ್ನು ಕಟ್ಟಿ 6 ತಿಂಗಳು ಕಳೆದರೂ ಸಹ ಅವರ ಕೆಲಸ ಮಾಡಿಕೊಟ್ಟಿಲ್ಲವೆಂದು, ಆದ್ದರಿಂದ, ಎದುರುದಾರರಾದ ಶ್ರೀ ರಾಮಚಂದ್ರ ಚವ್ಹಾಣ್ ಇವರ ವಿರುದ್ಧ ಕ್ರಮ ಜರುಗಿಸಿ ದೂರುದಾರರ ತೊಂದರೆಯನ್ನು ನಿವಾರಿಸಿಕೊಡಬೇಕೆಂದು ಕೋರಿ ಸಲ್ಲಿಸಿದ ದೂರಾಗಿರುತ್ತದೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕಾರ್ಕಳ ತಾಲ್ಲೂಕು, ಇನ್ನಾ ಗ್ರಾಮದ ಸರ್ವೇ ನಂಬರ್ 93/2ರ ಜಮೀನಿನ ಸರ್ವೇ ಕಾರ್ಯವನ್ನು ಸಂಬಂಧಪಟ್ಟ ಎಲ್ಲ ಬಾಜುದಾರರಿಗೆ ನೋಟೀಸ್ ನೀಡಿ ಕೈಗೊಂಡಿರುತ್ತೇನೆ. ಸರ್ವೇ ಸಮಯದಲ್ಲಿ ಸದರಿ ಸರ್ವೇ ನಂಬರಿನ ಬಾಜುದಾರರಾದ ಶ್ರೀ ರೋರೆ ಡಿಸಿಲ್ವರವರು ಹಾಜರಿದ್ದರು ಮತ್ತು ಅಳತೆ ಕಾರ್ಯದ ಬಗ್ಗೆ ಲಿಖಿತ ಆಕ್ಷೇಪಣೆ ನೀಡಿ, ಸ್ಥಳದಲ್ಲಿ ಅಳತೆ ಕೆಲಸ ನಿರ್ವಹಿಸಲು ತಕರಾರು ಮಾಡಿರುತ್ತಾರೆ ಮತ್ತು ದೂರುದಾರರು ಅವರ ಅನುಭವದ ಗಡಿಗಳನ್ನು ತೋರಿಸದೆ, ಈ ವಿಚಾರವಾಗಿ ಏನನ್ನೂ ಹೇಳದೆ ಗಡಿಗಳನ್ನು ಗುರುತಿಸಲು ಅಳತೆ ಕೆಲಸಕ್ಕೆ ಸಹಕಾರ ನೀಡಿರುವುದಿಲ್ಲ. ಆದ್ದರಿಂದ, ದೂರುದಾರರು ತಮ್ಮ ದೂರಿನಲ್ಲಿ ಆರೋಪಿಸಿರುವ ಅಂಶಗಳು ಸತ್ಯಕ್ಕೆ ದೂರವಾಗಿರುತ್ತದೆ ಹಾಗೂ ಎದುರುದಾರರು ಅಳತೆ ಕೆಲಸ ಪೂರೈಸಲು ಸ್ಥಳಕ್ಕೆ ಬರುವಾಗ ಗ್ರಾಮ ನಕ್ಷೆ ಅಥವಾ ಜಮೀನಿನ ನಕ್ಷೆ ತಂದಿರುವುದಿಲ್ಲ ಎಂದು ಆರೋಪಿಸಿರುವುದು ಸಮಂಜಸವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

3. ಎದುರುದಾರರ ಆಕ್ಷೇಪಣೆ ಮೇರೆಗೆ ಫಿರ್ಯಾದುದಾರರು ಆಕ್ಷೇಪಣೆಯ ಅಂಶಗಳನ್ನು ನಿರಾಕರಿಸಿ ತಮ್ಮ ಪ್ರತ್ಯುತ್ತರವನ್ನು ಈ ರೀತಿ ಸಲ್ಲಿಸಿರುತ್ತಾರೆ.

> ದಿನಾಂಕ 15/07/2016 ರಂದು ನನ್ನ ಜಮೀನಿನ ಗಡಿ ಗುರುತು ತೋರಿಸಲು ಮುಂಚಿತವಾಗಿ ನೋಟೀಸು ನೀಡಿರುವುದು ನಿಜವಾಗಿರುತ್ತದೆ. ಎದುರುದಾರರಾದ ಮೋಜಣಿದಾರರು ಮತ್ತು ಬಂದಿರುವ ಪೋಲೀಸರು ಸೇರಿ ಗುಂಪು ಕಟ್ಟಿ ಚರ್ಚಿಸುತ್ತಿದ್ದರು ವಿನಹ: ಆದಿನ ಯಾವುದೇ ಅಳತೆ ನಡೆದಿಲ್ಲ. ದಿನಾಂಕ 24/08/2016 ರಂದು ಸರ್ವೇ ಕೆಲಸ ಮಾಡುವ ಸಲುವಾಗಿ ನೋಟೀಸು ನೀಡಲಾಗಿತ್ತು. ದಿನಾಂಕ 24/08/2016 ರಂದು ತಾನು ಮತ್ತು ಇಬ್ಬರು ಪೋಲೀಸರು ಸ್ಥಳದಲ್ಲಿ ನಿಂತಿದ್ದು ನಾನು ಸ್ಥಳದಲ್ಲಿ ಹಾಜರಿಲ್ಲ ಎಂದು ತಿಳಿಸಿದ್ದು ಸತ್ಯಕ್ಕೆ ದೂರವಾದ ವಿಷಯವಾಗಿರುತ್ತದೆ. ಜವಾಬ್ದಾರಿತ ಸಾರ್ವಜನಿಕ ಸೇವೆಯ ಈ ಮೋಜಣಿದಾರ ಲೋಕಾಯುಕ್ತ ಸಂಸ್ಥೆಗೆ ತಪ್ಪು ಮಾಹಿತಿ ನೀಡಿದ್ದು, ಆ ದಿನ ಅವರು ತನ್ನಷ್ಟಕ್ಕೆ ನನ್ನ ಹಕ್ಕಿನ ಸ.ನಂ 93-2 1.24 ಕ್ಕೆ ಬಂದು ಹಿಂತಿರುಗಿರುತ್ತಾರೆ. ಅಲ್ಲಿ ಯಾರೊಬ್ಬ ಸಾರ್ವಜನಿಕರು ಇರಲಿಲ್ಲ. ನನ್ನಲ್ಲಿಯೂ ಜಮೀನಿನ ಬಗ್ಗೆ ಯಾವುದೇ ವಿವರವನ್ನು ಕೇಳಿರುವುದಿಲ್ಲ. ನನ್ನ ಜಮೀನಿನ ಸರ್ವೇ ನಂಬರ್ 93-2 ಕ್ಕೆ ಸಂಬಂಧಿಸಿದ ಯಾವುದೇ ರೆಕಾರ್ಡುಗಳನ್ನು ಕಛೇರಿಯಿಂದ ತಾರದೆ ಅಳತೆ ಕೆಲಸವನ್ನು ಮುಂದೂಡುವ ಒಂದೇ ದೃಷ್ಟಿಯಿಂದ ಇವರು ಬಂದಿರುವುದಾಗಿ ಅವರ ನಡತೆಯಿಂದ ನನಗೆ ತಿಳಿದು ಬಂದಿದ್ದು, ಅದಕ್ಕಾಗಿಯೇ ನಾನು ದಿನಾಂಕ 15/07/2016 ರಂದು ವಿಡಿಯೋ ರೆಕಾರ್ಡು ಮಾಡಿದ್ದು ಸಿ.ಡಿ ಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ಇದು ಮುಂಚಿತವಾಗಿ ನನಗೆ ತಿಳಿದು ಬಂದುದರಿಂದ ಇದರ ಮೇಲೆ ವಿಶ್ವಾಸವಿಲ್ಲವೆಂದು ನಾನು ದಿನಾಂಕ 04/08/2016 ರಂದು ಮೋಜಣಿದಾರರ ಬದಲಾವಣೆಗೆ ಅರ್ಜಿ ನೀಡಿದ್ದಾಗಿರುತ್ತದೆ. ಈ ದಿನ ಗ್ರಾಮದ ಗ್ರಾಮಕರಣಿಕರು ಮತ್ತು ಅವರ ಸಹಾಯಕರನ್ನೂ ನಾನು ಕರೆಸಿದ್ದು ಅವರು ನೀಡಿರುವ ಮಾಹಿತಿಯನ್ನು ಮೋಜಣಿದಾರರು ಕೇಳಲಿಲ್ಲ. ಗಡಿ ಗುರುತನ್ನು ಮಾಡಿಕೊಟ್ಟಿಲ್ಲ ಒಟ್ಟಾರೆಯಾಗಿ ನಾನು ಪ್ರಪತ್ರ ಸಂಖ್ಯೆ:1 (ಪಿರ್ಯಾದು) ಅರ್ಜಿಯಲ್ಲಿ ನಮೂದಿಸಿರುವ ಅಧಿಕಾರಿಗಳು ಸಾರ್ವಜನಿಕ ಸೇವೆಯಲ್ಲಿ ಕರ್ತವ್ಯಲೋಪ ಎಸಗಿರುತ್ತಾರೆ.

4. ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು, ದೂರುದಾರರ ಪ್ರತ್ಯುತ್ತರವನ್ನು, ಹಾಜರುಪಡಿಸಿರುವ ದಾಖಲೆಗಳನ್ನು ಮತ್ತು ಮಹಜರ್‌ನ್ನು ಪರಿಶೀಲಿಸಲಾಗಿ ದಿನಾಂಕ 24/08/2016 ರಂದು ಎದುರುದಾರರು ಗಡಿ ಗುರುತಿಸುವ ಸಲುವಾಗಿ ಸ್ಥಳಕ್ಕೆ ಬಂದಾಗ ದೂರುದಾರರು ಮತ್ತು ಬಾಜುದಾರರು ಸ್ಥಳದಲ್ಲಿ ಹಾಜರಿದ್ದದು ಕಂಡು ಬರುತ್ತದೆ. ಬಾಜುದಾರರು ದಿನಾಂಕ 23/08/2016 ರಂದು ತಹಶೀಲ್ದಾರ್‌ರವರಿಗೆ ಮನವಿ ಪತ್ರ ಕೊಟ್ಟ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಮನವಿಯಲ್ಲಿ ಪಿರ್ಯಾದುದಾರರ ಜಮೀನಿನ ಪಕ್ಕದಲ್ಲಿ ಇರುವ ಜಮೀನಿನ ಮಾಲೀಕರಿದ್ದು, ಇವರ ನಡುವೆ ಜಮೀನು ಅತಿಕ್ರಮಿಸುವ ವಿಚಾರವಾಗಿ ತಕರಾರು ಇರುವುದರಿಂದ, ಪಿರ್ಯಾದುದಾರರು ತಮ್ಮ ಜಮೀನನ್ನು ಅತಿಕ್ರಮಿಸುವ ಸಂಭವವಿರುತ್ತದೆ. ಕಾರಣ, ಎಲ್ಲಾ ಜಮೀನುಗಳನ್ನು ಏಕ ಕಾಲದಲ್ಲಿ ಅಳತೆ ಮಾಡುವ

ಅವಶ್ಯಕತೆ ಇದೆ. ಅಳತೆ ಸಂದರ್ಭದಲ್ಲಿ ಜಮೀನುಗಳ ದಾಖಲೆ ಮತ್ತು ಗಡಿಗಳನ್ನು ಪರಿಶೀಲಿಸುವ ಅಗತ್ಯವಿದೆ. ದಾಖಲೆಗಳನ್ನು ಹಾಜರುಪಡಿಸಲು ಕಾಲಾವಕಾಶ ಬೇಕಿದೆ ಎಂದು ಹೇಳಿ ದಿನಾಂಕ 24/08/2016ರಂದು ನಿಗಧಿಪಡಿಸಿದ ಸರ್ವೇ ಕೆಲಸವನ್ನು ಮುಂದೂಡಲು ವಿನಂತಿಸಿರುತ್ತಾರೆ. ಸದರಿ ಮಹಜರ್ ಮತ್ತು ಬಾಜು ಜಮೀನುದಾರರ ಅರ್ಜಿಯ ಅಂಶಗಳಿಂದ ಎದುರುದಾರರು ದಿನಾಂಕ 24/08/2016 ರಂದು ಸರ್ವೇ ಕೆಲಸ ನಿರ್ವಹಿಸಿರುವುದಿಲ್ಲ. ಆದರೆ, ದೂರುದಾರರ ಜಮೀನು ಸರ್ವೇ ಮಾಡಲು ನೀಡಿದ ಅರ್ಜಿ ರೀತ್ಯಾ ಈವರೆಗೂ ಸರ್ವೇ ಮಾಡಿದ ಬಗ್ಗೆ ಮಾಹಿತಿ ಮತ್ತು ದಾಖಲೆ ಲಭ್ಯವಾಗಿರುವುದಿಲ್ಲ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ದೂರುದಾರರಾದ ಶ್ರೀ ಮರಿಯನ್ ಪ್ರಾನ್ಸಿಸ್ ಡಿ'ಸೋಜ ಇವರ ಕಾರ್ಕಳ ತಾಲ್ಲೂಕು, ಇನ್ನಾ ಗ್ರಾಮದ ಸ್ವಂತ ಹಕ್ಕಿನ ಮತ್ತು ಸ್ವಾಧೀನ ಹೊಂದಿರುವ ಸರ್ವೇ ನಂಬರ್ 93/2ರಲ್ಲಿನ 1 ಎಕರೆ 24 ಸೆಂಟ್ಸ್ ಜಮೀನಿನ ಸರ್ವೇ ಕಾರ್ಯ ಮಾಡಿ ಗಡಿ ಗುರುತನ್ನು ಗುರುತಿಸಲು ಕಾನೂನಿನಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 28/9/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**